ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಏಕೆ ಅವಸರ ಮಾಡುತ್ತೀರಿ? ನನಗೂ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ಇಲ್ಲಿ ಕೇಳಿ. ಶ್ರೀ ವಸಂತರಾವ್ ಪಾಟೀಲರು ರಾಜೀನಾಮೆ ಕೊಟ್ಟಮೇಲೆ ಅವರ ಡಿಪಾರ್ಟ್‌ಮೆಂಟ್ ಮುಖ್ಯಮಂತ್ರಿಗಳ ಕೈಗೆ ಇದೆ. ಮುಖ್ಯಮಂತ್ರಿಗಳು ಈಗ ಇಲ್ಲಿ ಇಲ್ಲದೇ ಇರುವ ಕಾರಣ ಮಾನ್ಯ ಕಾನೂನು ಮಂತ್ರಿಗಳಿಗೆ ಆ ಅಧಿಕಾರ ಕೊಟ್ಟಿದ್ದಾರೆ, ಇದರಲ್ಲಿ ಹೇಳುವುದು, ಕೇಳುವುದು ಏನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಕೆ. ಎಚ್. ಪಾಟೀಲರು ಪ್ರಶ್ನೆ ಕೇಳಿದರು, ಅವರಿಗೆ ಉತ್ತರ ಕೊಟ್ಟಿದ್ದಾರೆ. ನಾನು ಜಾಸ್ತಿ ಕೇಳುವುದಿಲ್ಲ. ಈಗ ಮಾನ್ಯ ಪಾಟೀಲರು ಒಂದು ಮಾತನ್ನು ಹೇಳಿದರು, ಅವರಂತೆ ಬಹಳ ಒಳ್ಳೆಯ ಮಂತ್ರಿಗಳೂ ಕೂಡ ಬಿಟ್ಟು ಹೋಗಿದ್ದಾರೆ.

ಅಧ್ಯಕ್ಷರು.—ಇದು ಹೇಗೆ ಈ ಸಂದರ್ಭದಲ್ಲಿ ಕೆಲವೆಮೆಂಟ್ ಆಗುತ್ತದೆ? ನೀವು ಈಗ ಕುಳಿತು ಕೊಳ್ಳಿ. ಜಾಲಪ್ಪನವರೇ, ನೀವು ವಿಧೇಯಕವನ್ನು ಮಂಡನೆ ಮಾಡಿ.

ಶ್ರೀ ಕೆ. ಮಲ್ಲಪ್ಪ.—ವಿರೋಧಪಕ್ಷದವರದ್ದು ಈಗ ದೇವರಿಲ್ಲದ ಗುಡಿಯ ಪರಿಸ್ಥಿತಿ ಇದೆ. ಅದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ಮರೆತಿರುವ ಹಾಗೆ ಕಾಣುತ್ತದೆ.

(ಗೊಂದಲ)

SRI K.H, PATIL.—What has he said about the Opposition Party? We are not here to tolerate any nonsense. What he said? He must withdraw it or you expunge it. ನಿಮಗೆ ಈಗ ಅಧಿಕಾರ ಇದೆ, ನಮಗೆ ಅಧಿಕಾರ ಇಲ್ಲ. ಅಧಿಕಾರದಲ್ಲಿದ್ದವರಂ ತಪ್ಪು ಮಾಡಿದರೆ ನಾವು ಕೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.- ತಪ್ಪು ಮಾಡದೇ ಇದ್ದರೂ ಪ್ರಸಂಗಕ್ಕೆ ಬಾರದೇ ಇರತಕ್ಕಂಥ ವಿಷಯಗಳ ಬಗ್ಗೆ ಟೀಕೆ ಮಾಡಿದರೆ ಸರಿಯಾದ ಉತ್ತರವನ್ನು ಯಾರಾದರೂ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಜಾಲಪ್ಪನವರೇ ನೀವು ಮುಂದೆ ಮಾಡಿರಿ.

೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟದ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟದ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ವ್ಯವಸಾಯ ಉತ್ಪನ್ನಗಳ ಮಾರಾಟ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.*

---

*Annexure.